* ಜೆ.ಎಸ್.ಎಸ್. ಕಾನೂನು ಕಾಲೇಜು, ಮೈಸೂರು,

* ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು,

* ಮಹಾಜನ ಕಾನೂನು ಕಾಲೇಜು, ಮೈಸೂರು.

ಆ) ಅಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಇ) ಉದ್ಭವಿಸುವುದಿಲ್ಲ.

589 (899) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಚಾಮರಾಜ ಕ್ಷೇತ್ರದ ಆಶ್ರಯ ಬಡಾವಣೆಗಳು ಎಲ್ಲೆಲ್ಲಿವೆ; ಅವುಗಳ ನಿರ್ಮಾಣ ಆದದ್ದು ಯಾವಾಗ; ಎಷ್ಟೆಷ್ಟು ಮನೆ/ನಿವೇಶನಗಳನ್ನು ಯಾವ ಯಾವ ಬಡಾವಣೆಗಳಲ್ಲಿ ನಿರ್ಮಿಸಲಾಗಿದೆ (ತಿಳಿಸುವುದು);

ಆ) ಈ ಬಡಾವಣೆಗಳಲ್ಲಿ ಇನ್ನೂ ಎಷ್ಟು ಮನೆ/ನಿವೇಶನಗಳನ್ನು ನಿರ್ಮಿಸಬಹುದಾಗಿದೆ ತಿಳಿಸುವುದು;

ಇ) ಈ ಬಡಾವಣೆಗಳ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಮತ್ತು ಬಡಾವಣೆಗಳ ಮನೆ/ನಿವೇಶನಗಳಿಗೆ ನೀರು ಸರಬರಾಜು ಮಾಡಲು ಹಾಗೂ ಬಡಾವಣೆಗಳಿಗೆ ವಿದ್ಯುತ್‌ಚ್ಛಕ್ತಿ, ಒಳಚರಂಡಿ, ಹೊರಚರಂಡಿ ವ್ಯವಸ್ಥೆ ಕಲ್ಪಿಸಲು ಎಷ್ಟು ವೆಚ್ಚವಾಗುವುದು (ವಿವರಗಳನ್ನು ಪ್ರತಿ ಬಡಾವಣೆವಾರು ತಿಳಿಸುವುದು); ತಿಳಿಸುವುದು;

ಈ) ಈ ಬಗ್ಗೆ ಮಹಾನಗರ ಪಾಲಿಕೆ ಎಷ್ಟು ಮೊತ್ತ ಬಿಡುಗಡೆ ಕೋರಿ ಯಾವಾಗ ಪ್ರಸ್ತಾವನೆ ಕಳುಹಿಸಿದೆ ತಿಳಿಸಿ; ಅಭಿವೃದ್ಧಿ ಕಾಮಗಾರಿಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ನಿಲುವನ್ನು ತಿಳಿಸಿ; ಯಾವಾಗ ಬಿಡುಗಡೆ ಮಾಡಲಾಗುವುದು ತಿಳಿಸುವುದು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಚಾಮರಾಜ ಕ್ಷೇತ್ರದಲ್ಲಿ 1993-94ನೇ ಸಾಲಿಗೆ 852 ಮನೆಗಳ ನಿರ್ಮಾಣವಾಗಿದ್ದು, ಬೋಗಾದಿ ಗ್ರಾಮದಲ್ಲಿ 455 ಮನೆಗಳು ಹಿನ್‌ಕಲ್ ಗ್ರಾಮದಲ್ಲಿ 187 ಮನೆಗಳು ಮತ್ತು ಹೆಬ್ಬಾಳ ಗ್ರಾಮದಲ್ಲಿ 210 ಮನೆಗಳು ನಿರ್ಮಾಣವಾಗಿದೆ. 1999-2000

ಸಾಲಿಗೆ ಶ್ರೀರಾಂಪುರದಲ್ಲಿ 274 ಮನೆಗಳು, 2001–02ನೇ ಸಾಲಿನಲ್ಲಿ ಮಂಡಕಳ್ಳಿ ಗ್ರಾಮದಲ್ಲಿ 425 ಮನೆಗಳು ನಿರ್ಮಾಣವಾಗಿರುತ್ತದೆ. 2002–2003ನೇ ಸಾಲಿಗೆ ಕೇರ್ಗಳ್ಳಿ ಮತ್ತು ಅಯ್ಯಜಯ್ಯನಹುಂಡಿ ಗ್ರಾಮದಲ್ಲಿ 489 ನಿವೇಶನಗಳು ಹಂಚಿಕೆಯಾಗಿದ್ದು ಈ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಗೌರವಾನ್ವಿತ ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ.

ಆ) ಈ ಬಡಾವಣೆಗಳಲ್ಲಿ ಹೆಚ್ಚು ಮನೆಗಳನ್ನು ನಿರ್ಮಿಸಲು ಖಾಲಿ ನಿವೇಶನಗಳು ಲಭ್ಯವಿಲ್ಲ.

ಇ) ಮಂಡಕಳ್ಳಿ ಶ್ರೀರಾಂಪುರ, ಹಿನ್‌ಕಲ್ ಮತ್ತು ಅಯ್ಯಜಯ್ಯನಹುಂಡಿಗಳಲ್ಲಿ ವಿದ್ಯುತ್, ನೀರು ಸರಬರಾಜು ಒಳಚರಂಡಿ ಹಾಗೂ ರಸ್ತೆಗಳ ನಿರ್ಮಾಣಕ್ಕೆ ಅಂದಾಜು 272.64 ಲಕ್ಷ ಅಂದಾಜು ಪಟ್ಟಿ ಸಿದ್ಧಪಡಿಸಿದ್ದು ಅದರ ವಿವರಗಳು ಈ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ಕ್ರ.ಸಂ.	ಪ್ರದೇಶ	ನೀರು ಸರಬರಾಜು	ವಿದ್ಯುತ್	ರಸ್ತೆ ಮತ್ತು ಒಳಚರಂಡಿ
1	ಬೋಗಾರಿ	2.50	–	2.50
2	ಮಂಡಕಟ್ಟಿ	28.00	8.50	51.00
3	ಶ್ರೀರಾಂಪುರ	16.00	4.64	28.00
4	ಹಿನ್‌ಕಲ್	11.00	–	21.00
5	ಅಯ್ಯಜಯ್ಯನಹುಂಡಿ	30.00	9.50	60.00
	ಒಟ್ಟು	**87.50**	**22.64**	**162.50**

ಈ) ಮಹಾನಗರ ಪಾಲಿಕೆ ವ್ಯಾಪ್ತಿಯಡಿ ಬರುವ ಎಲ್ಲಾ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಸಲುವಾಗಿ ರೂ.667.28 ಲಕ್ಷಗಳನ್ನು ಬಿಡುಗಡೆಗೊಳಿಸಲು ನಿಗಮಕ್ಕೆ ಮಹಾನಗರ ಪಾಲಿಕೆಯು ಪತ್ರ ಬಂದಿದೆ. ಈ ಬಗ್ಗೆ ಮಹಾನಗರ ಪಾಲಿಕೆಗೆ ದಿನಾಂಕ : 17–04–2007 ರಂದು ಪತ್ರ ಬರೆದು ಸದರಿ ಬಡಾವಣೆಗಳಿಗೆ ಪಾಲಿಕೆಯ ಅನುದಾನದಲ್ಲಿ ಅಥವಾ ಜವಾಹರಲಾಲ್ ನೆಹರು ನ್ಯಾಷನಲ್ ಅರ್ಬನ್ ರಿನ್ಯೂಯಲ್ ಮಿಷನ್ ಯೋಜನೆಯಡಿ ಸೌಲಭ್ಯವನ್ನು ಕಲ್ಪಿಸಿಕೊಡಲು ತಿಳಿಸಲಾಗಿರುತ್ತದೆ.